ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಅಸಿಸ್ಟೆಂಟ್ ಕಮೀಷನರ್ ಈಗಾಗಲೇ ೩೩ ಕೇಸುಗಳಿಗೆ ಅವಾರ್ಡ್ ಪಾಸ್ ಮಾಡಿದ್ದಾರೆ. ಮತ್ತು ಡಿವಿಷನಲ್ ಕಮಿಷನರ್ ಈ ಸಿರಗುಪ್ಪ ಮತ್ತು ತೆಕ್ಕಲಕೋಟೆ ಪ್ರೊಸೀಡಿಂಗ್ಸ್‌ನ್ನು ಕಂಪ್ಲೀಟ್ ಮಾಡಬೇಕಾದರೆ ಮೊದಲನೆಯದಕ್ಕೆ ೩ ತಿಂಗಳು ಮತ್ತು ಎರಡನೇದಕ್ಕೆ ೫ ತಿಂಗಳು ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.—ಮಾನ್ಯ ಮಂತ್ರಿಗಳು ಸಿರಗುಪ್ಪ ಪ್ರೊಸೀಡಿಂಗ್ಸ್‌ನ್ನು ಕಂಪ್ಲೀಟ್ ಮಾಡಬೇಕಾದರೆ ೩ ತಿಂಗಳು ಹಾಗೂ ತೆಕ್ಕಲಕೋಟೆ ಪ್ರೊಸೀಡಿಂಗ್ಸ್ ಅನ್ನು ಪೂರ್ಣ ಮಾಡಬೇಕಾದರೆ ೫ ತಿಂಗಳು ಬೇಕಾಗುತ್ತದೆ ಎಂದು ಹೇಳಿದರು. ಬಹಳ ಸಂತೋಷ. ಆಗಲಾದರೂ ಕೂಡ ಜಾಗ್ರತೆಯಾಗಿ ಆ ಜನರಿಗೆ ನಿವೇಶನ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಇದರ ಬಗ್ಗೆ ಡಿವಿಷನಲ್ ಕಮೀಷನರ್‌ರವರಿಂದ ರಿಪೋರ್ಟ್ ಕಾಲ್‌ಫಾರ್ ಮಾಡಿದ್ದೇನೆ. ಮತ್ತು ಅಸಿಸ್ಟೆಂಟ್ ಕಮೀಷನರ್‌ರವರು ಈಗಾಗಲೇ ೩೩ ಕೇಸುಗಳಲ್ಲಿ ಅವಾರ್ಡ್ ಪಾಸ್ ಮಾಡಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಸಿರಗುಪ್ಪಕ್ಕೆ ಸೇರಿದ ಪ್ರೊಸೀಡಿಂಗ್ಸ್ ಅನ್ನು ಕಂಪ್ಲೀಟ್ ಮಾಡಬೇಕಾದರೆ ೩ ತಿಂಗಳು ಕಾಲಾವಕಾಶ ಬೇಕಾಗುತ್ತದೆ ಹಾಗೂ ತೆಕ್ಕಲಕೋಟೆ ಟೌನ್‌ಗೆ ಸೇರಿದಂಥಾ ಪ್ರೊಸೀಡಿಂಗ್ಸ್‌ನ್ನು ಪೂರ್ಣ ಮಾಡಬೇಕಾದರೆ ೫ ತಿಂಗಳು ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಸಾಧ್ಯವಾದಷ್ಟು ಆಷ್ಟರೊಳಗೆ ಆದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ತಾವು ಈಗತಾನೇ ೩ ತಿಂಗಳು ಮತ್ತು ೫ ತಿಂಗಳೊಳಗೆ ಆ ಕೆಲಸಗಳು ಮುಗಿಯುತ್ತದೆ ಎಂದು ಹೇಳಿದಿರಿ ಈ ಒಂದು ವ್ಯವಹಾರ ೩-೪ ವರ್ಷದಿಂದಲೂ ಕೂಡ ನಡೆಯುತ್ತಾ ಇದೆ. ಆದುದರಿಂದ ಅಲ್ಲಿನ ಜನರಿಗೆ ತೊಂದರೆಯಾಗದಂತೆ ತಾವು ಆಸೆಂಬ್ಲಿಯಲ್ಲಿ ಏನು ಹೇಳಿದ್ದೀರೋ ಆ ಪ್ರಕಾರ ಆದಷ್ಟು ಜಾಗ್ರತೆ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಬೇಗನೆ ಕೊಡಿಸುತ್ತೀರಾ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ಸಾಮಾನ್ಯವಾಗಿ ಈ ಆಕ್ವಿಸಿಷನ್ ಕೇಸಸ್ ನಿದಾನವಾಗುವುದು ಸಹಜವೇ. ತಮಗೆ ಗೊತ್ತಿರುವ ಹಾಗೆ ಈ ಬಗ್ಗೆ ಬೇಕಾದಷ್ಟು ಪ್ರಾಬ್ಲೆಮ್ಸ್ ಬರುತ್ತವೆ. ಈ ಬಗ್ಗೆ ಕೋರ್ಟಿಗೆ ಹೋಗಿದ್ದರು. ಆದುದರಿಂದ ನಾನು ಮಾನ್ಯ ಸದಸ್ಯರಿಗೆ ಮೊದಲೇ ಹೇಳಿದ್ದೇನೆ ಏನೆಂದರೆ ಆದಷ್ಟು ಜಾಗ್ರತೆಯಾಗಿ ಈ ಬಗ್ಗೆ ಏನೇನು ಕೆಲಸಗಳು ಆಗಬೇಕೋ ಆದನ್ನು ಮುಗಿಸಿ ಅವರಿಗೆ ಆ ಜಮೀನನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆಗಳು ಬಂದಾಗ ಎಷ್ಟೋ ಸದಸ್ಯರು ಹಾಜರಿರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ನಮ್ಮ ಎದುರು ಪಕ್ಷದವರನ್ನು ನೋಡಿದರೂ ಸಹ ಅಲ್ಲಿ ೩-೪ ಜನರನ್ನು ಕೂತಿರುವುದನ್ನು ಬಿಟ್ಟರೆ ಬೇರೆ ಯಾರೂ ಇಲ್ಲಾ. ಹಾಗೆ ನಮ್ಮಲ್ಲೂ ಕೂಡ ಸ್ವಲ್ಪ ಸ್ವಲ್ಪ ಖಾಲಿಯಾಗಿದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಜನತಾಪಕ್ಷದ ಸದಸ್ಯರು ೩-೪ ಜನರನ್ನು ಬಿಟ್ಟರೆ ಬಾಕಿ ಜಾಗ ವೆಲ್ಲಾ ಪಾಗೆಯೇ ಖಾಲಿಯಾಗಿವೆ.

ಅಧ್ಯಕ್ಷರು.—ಅವರು ಏನಾದರೂ ಮಾಡಿಕೊಳ್ಳಲಿ ತಾವು ಸರಿಯಾಗಿ ಇರಬೇಡವೇ?

Deposit of amount of Gadag Co-operative Textile Mills Ltd., Hulkoti, in a bank under Liquidation

1036. SRI C. S. MUTTINPENDIMATH (Gadag).—Will the Minister for Co-operation be pl ased to state :—

(a) whether it has come to the notice of the Government that a huge sum of money belonging to Gadag Co-operative Textile Mill Ltd., Hulkoti, has been deposited in a Bank which is under Liquidation;

(b) if so whether it has been done in the interest of the said Mill;

(c) what action Government intend to take against the Textile Mill for depositing the amount in a Bank which is under liquidation?

SRI V. M. KUSHNUR (Minister for Co-operation).—

(a) No.

(b) Does not araise.

(c) Does not araise.

ಶ್ರೀ ಸಿ. ಎಸ್. ಮುತ್ತಿನಪೆಂಡಿಮಠ್.—ಸ್ವಾಮಿ, ಹುಲಿಕೋಟೆ ಟೆಕ್ಸ್‌ಟೈಟ್ ಮಿಲ್‌ನವರು ತಮ್ಮ ಒಂದು ಕೋ-ಆಪರೇಟೀವ್ ಬ್ಯಾಂಕಿನಲ್ಲಿ ಅಂದರೆ ರೆಡ್ಡಿ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದರೆ ಬಂದಿಲ್ಲ ಎಂದು ತಿಳಿಸಿದ್ದೀರಿ. ಈ ಬ್ಯಾಂಕ್ ಈಗಾಗಲೇ ತನ್ನ ಒಂದು ಆಸ್ತಿತ್ವವನ್ನು ಕಳೆದುಕೊಂಡಿರುವುದರಿಂದ ಸರ್ಕಾರದವರು ಇದನ್ನು ಲಿಕ್ವಿಡೇಷನ್ ಮಾಡುವುದಕ್ಕೆ ನೋಟೀಸ್ ಇಷ್ಯೂ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಇಂಥಾ ಒಂದು ಬ್ಯಾಂಕ್‌ನಲ್ಲಿ ಹುಲಕೋಟೆ ಟೆಕ್ಸ್‌ಟೈಲ್ ಮಿಲ್‌ನವರು ಹಣವನ್ನು ತೊಡಗಿಸಿದ್ದಾರೆ ಅನ್ನುವುದು ಈಗಲಾದರೂ ಕೂಡ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವಿ. ಎಂ. ಕುಶನೂರ್.—ಬ್ಯಾಂಕ್ ಏನೂ ಲಿಕ್ವಿಡೇಷನ್ ಆಗಿಲ್ಲಾ. ಆದರ ಮೇಲೆ ಒಬ್ಬ ಆಡ್ಮಿನಿಸ್ಟ್ರೇಟರ್, ಅನ್ನು ಅಪಾಯಿಂಟ್ ಮಾಡಬೇಕು ಅಂತ ಮಾಡಿದ್ದೇವೆ. ಅದಕ್ಕೆ ಆದರ ವಿರುದ್ಧವಾಗಿ ಕೆಲವರು ಹೈಕೋರ್ಟಿಗೆ ಹೋಗಿ ರಿಟ್ ಹಾಕಿದ್ದಾರೆ. ಅವರಿಗೆ ಸ್ಟೇ ಸಿಕ್ಕಿದೆ. ನನಗೆ ಬಂದಿರುವ ಮಾಹಿತಿ ಪ್ರಕಾರ ೧೩ ಡಿಸೆಂಬರ್ ೧೯೭೮ರಲ್ಲಿ ಅವರು ೧೨ ಲಕ್ಷ ರೂಪಾಯಿಗಳನ್ನು ೩ ತಿಂಗಳ ಸಲುವಾಗಿ ಆ ಬ್ಯಾಂಕ್‌ನಲ್ಲಿ ಇಟ್ಟಿದ್ದರು. ಆ ಹಣವನ್ನು ಇನ್ನೂ ವಿತ್‌ಡ್ರಾ ಮಾಡಿಲ್ಲಾ. ನಂತರ ೧೫-೩-೭೯ ರಲ್ಲಿ ಅದನ್ನು ವಿತ್‌ಡ್ರಾ ಮಾಡುವ ಹಾಗೆ ಆದೇಶ ಕೊಟ್ಟಿದ್ದೇವೆ ಮತ್ತು ಆ ಬ್ಯಾಂಕ್‌ನಲ್ಲಿ ಯಾವ ಹಣವನ್ನೂ ಸಹ ಇಡಬಾರದು ಅಂತ ಈಗಾಗಲೇ ಆದೇಶ ಕೊಟ್ಟಿದ್ದೇವೆ.

ಶ್ರೀ ಸಿ. ಎಸ್. ಮುತ್ತಿನಪೆಂಡಿಮಠ್.—ಲಿಕ್ವಿಡೇಟ್ ಆದಂಥ ಸೊಸೈಟಿಗಳಲ್ಲಿ ಹುಲುಕೋಟಿ ಮಿಲ್‌ನವರು ಹಣವನ್ನು ಇಡುತ್ತಿದ್ದಾರೆ. ಇಂಥ ಸೊಸೈಟಿಗಳಲ್ಲಿ ಹಣವನ್ನು ತೊಡಗಿಸಬಾರದು ಎಂದು ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ವಿ. ಎಂ. ಕುಶನೂರ್.—ಮಾನ್ಯ ಸದಸ್ಯರು ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರ ಹೇಳಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಸಿ. ಎಸ್. ಮುತ್ತಿನಪೆಂಡಿಮಠ್.—ಇದಕ್ಕೂ ಕೂಡ ತಾವು ಆದೇಶ ಕೊಡಬಹುದಲ್ಲವೇ?

ಶ್ರೀ ವಿ. ಎಂ. ಕುಶನೂರ್.—ತಾವು ಪ್ರತ್ಯೇಕ ಪ್ರಶ್ನೆಯನ್ನು ಹಾಕಿದರೇ ಅಲ್ಲಿ ಪರಿಸ್ಥಿತಿಯನ್ನು ತಿಳಿದು ನಂತರ ಉತ್ತರ ಕೊಡುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು ಅಂದರೆ ಪ್ರಶ್ನೆ ಸ. ನಂ. ೧೦೫೫ ಕೇಳಿ ೧೧-೨೨ ತಿಂಗಳಾಯಿತು. ಇದು ೧೯೫೮-೫೯ನೇ ಇಸವಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಈ ಪ್ರಶ್ನೆಯ ಮಹತ್ವ ಮುಗಿದು ಹೋದ ಮೇಲೆ ಇದಕ್ಕೆ ಉತ್ತರ ಬಂದರೆ ಅದಕ್ಕೆ ಮಹತ್ವವಿಲ್ಲ. ಆದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳುವುದಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರು, ಈ ಪ್ರಶ್ನೆಗಳಿಗೆ ಉತ್ತರ ಕಳುಹಿಸುವುದಕ್ಕೆ ವೇಳೆಯ ನಿರ್ಭಂದ ಹಾಕಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಾನು ಕೇಳಿದ ಪ್ರಶ್ನೆಯ ಮಹತ್ವ ಹೊರಟು ಹೋಗಿದೆ.

ಅಧ್ಯಕ್ಷರು.—ನಾನು ಅದನ್ನು ವಿಚಾರ ಮಾಡಿ ನೋಡಿಸುತ್ತೇನೆ.